## ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬೆಳಗಾವಿ.

ಓ.ಎಸ್ ನಂಃ 398 ಃ 2010

ಡಿ. ಡಬ್ಲ್ಯೂ- 2

ದಿ. 02-06-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಶ್ರೀ. ಎ.ಬಿ.ಎನ್. ವಕೀಲರಿಂದ ಃ-

(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ . ರಾಹುಲ್ ಕೆ.ಎಸ್ ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷ್ಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ . )

2 ನೇ ಪ್ರತಿವಾದಿಯ ಮನೆ ಉದ್ದ 47 ಅಗಲ 28.5 ವಿಸ್ತೀರ್ಣ ಇರುತ್ತದೆ. ನಾನು ವೈರಿಂಗ್ ಕೆಲಸ ಮಾಡುವುದರಿಂದ ಅವರ ಮನೆ ಅಳತೆ ನನಗೆ ತಿಳಿದಿದೆ. ನಾನು ವೈರಿಂಗ್ ಮಾಡಲು ಲೈಸನ್ಸ್ ಪಡೆದಿರುತೇನೆ ಅದು ನನ್ನ ಮನೆಯಲ್ಲಿರುತ್ತದೆ ಸಾಕ್ಷಿಗೆ ಹಾಜರುಪಡಿಸಲು ಅಡಚಣೆ ಇದೆಯೇ ಎಂದು ಪ್ರಶ್ನಿಸಿದರೇ ಸಾಕ್ಷಿಯು ಹುಡುಕಬೇಕು ಎಂದು ನುಡಿಯುತ್ತಾರೆ. ನಾನು ವೈರಿಂಗ್ ಕೆಲಸ ಮಾಡುತೇನೆ ಎಂದು ನಮೂದಾಗಿಲ್ಲ ಅಂದರೆ ಸರಿ. ನಾನು ವೈರಿಂಗ್ ಮಾಡುವುದಿಲ್ಲ ಮತ್ತು ಲೈಸನ್ಸ್ ಇಲ್ಲ ಅಂದರೆ ಸರಿ. 2 ನೇ ಪ್ರತಿವಾದಿಯ ಮನೆಯ ಅಳತೆಯನ್ನು ನಾನು ಮಾಡಿರುತೇನೆ . 2009 -2010 ರ ಸಾಲಿನ ಪಂಚಾಯತಿ ಸದಸ್ಯರ ಸಮ್ಮುಖದಲ್ಲಿ ಮಾಡಿರುತೇನೆ. ಪಂಚಾಯತಿಯಿಂದ ನನಗೆ ನೋಟಿಸು ಬಂದಿರಲಿಲ್ಲ ಸಾಕ್ಷಿಯು ಮುಂದುವರೆದು ತನ್ನ ಅಣ್ಣನಿಗೆ ನೋಟಿಸು ಬಂದಿತ್ತು ಅವರು ತನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸನ್ನು ಹಾಜರು ಪಡಿಸಲು ಆಗುವುದಿಲ್ಲ ಏಕೆಂದರೆ ನನ್ನ ಅಣ್ಣ ಹರಿದು ಹಾಕಿರುತ್ತಾರೆ. ಪಂಚಾಯತಿಯಿಂದ ಯಾವುದೇ ನೋಟಿಸು ಬಂದಿರುವುದಿಲ್ಲ ಮತ್ತು ನಾನು ಅಳತೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿ ಹೇಳಿದ ವಿಸ್ತೀರ್ಣವನ್ನು ನಾನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ವೈಯಕ್ತಿಕವಾಗಿ ಮಾಹಿತಿಯಿಲ್ಲ ಅಂದರೆ ಸರಿಯಲ್ಲ. ಮನೆ ನಂ.125 ರ ವಿಸ್ತೀರ್ಣ ನನಗೆ ತಿಳಿದಿಲ್ಲ. 112 x 30 ಉದ್ದ ಅಗಲ ಇದೆ ಅಂದರೆ ಸಾಕ್ಷಿಯು ತನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಅವರ ಸಹೋದರ ರಾಮಚಂದ್ರ ಸಂಭಾಜಿ ಅಣ್ಣತಮ್ಮಂದಿರು ಅಂದರೆ ಸರಿ. ವಾದಿ ಮತ್ತು ಅವರ ಸಹೋದರ ರಾಮಚಂದ್ರ ಸಂಭಾಜಿ 112 x 30 ವಿಸ್ತೀರ್ಣ ಅರ್ಧ ಹಿಸ್ಸೆಗಳಾಗಿ ಭಾಗ ಮಾಡಿಕೊಂಡಿರುತ್ತಾರೆ ಅಂದರೆ ಸಾಕ್ಷಿಯು ತನಗೆ ತಿಳಿದಿಲ್ಲ ಎಂದು

ನುಡಿಯುತ್ತಾರೆ. 112 ಅಡಿ ಉದ್ದದಲ್ಲಿ 70 ಅಡಿ ಉದ್ದದ ವಾದಿ ಮತ್ತು ಅವರ ಸಹೋದರ ಮನೆಯಿದೆ ಅಂದರೆ ಸಾಕ್ಷಿಯು ತನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಂತರ ಖುಲ್ಲಾ ಜಾಗವಿದೆ ಅಂದರೆ ಸಾಕ್ಷಿಯು 10 ರಿಂದ 12 ಅಡಿ ಇರಬಹುದು ಎಂದು ನುಡಿಯುತ್ತಾರೆ. ಸದರಿ 10 ರಿಂದ 12 ಅಡಿ ಖಾಲಿ ಜಾಗದಲ್ಲಿ ವಾದಿಯವರ ಸೆಂಡಾಸ್ ,ಪಿಟ್ಟ ಡಂಗೂ ಮತ್ತು ಗೊಬರ್ ಗ್ಯಾಸ್ ಇದೆ ಅಂದರೆ ಸರಿಯಲ್ಲ. ವಾದಿಯವರು ಸೆಂಡಾಸ್ ,ಪಿಟ್ಟ ಡಂಗೂ ಮತ್ತು ಗೊಬರ್ ಗ್ಯಾಸ್ ಇದೆ ಫೋಟೋವನ್ನು ಹಾಜರು ಪಡಿಸಿದ್ದಾರೆ ಅಂದರೆ ಸಾಕ್ಷಿಯು ತಾನು ಅದನ್ನು ನೋಡಿರುವುದಿಲ್ಲ ಮತ್ತು ನೋಡಲು ಅಡಚಣೆ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯವರ ಸಹೋದರ ಸಂಭಾಜಿ ಸೆಂಡಾಸ್ 2 ನೇ ಪ್ರತಿವಾದಿಯವರ ಮನೆಗೆ ಹೊಂದಿಕೊಂಡಿದೆ ಅಂದರೆ ಸಾಕ್ಷಿಯು ಅದು 2 ನೇ ಪ್ರತಿವಾದಿಗೆ ಸೇರಿದ ಸೆಂಡಾಸ್ ಆಗಿರುತ್ತದೆ ಎಂದು ನುಡಿಯುತ್ತಾರೆ .

2 ನೇ ಪ್ರತಿವಾದಿಯ ಮನೆಯ ಹಿಂದೆ ಖುಲ್ಲಾ ಜಾಗವಿಲ್ಲ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಯು 2010-2011 ರಲ್ಲಿ ಅವರ ಮನೆ ಹಿಂದೆ ಶೆಡ್ಡು ನಿರ್ಮಿಸಿರುತ್ತಾರೆ . 2 ನೇ ಪ್ರತಿವಾದಿಯು ವಾದಿಯ ಗೊಬರ್ ಗ್ಯಾಸ್‌ಗೆ ಎರಡು ಮೂರು ಟ್ರಕ್ ಮಣ್ಣು ಹಾಕಿ ಗೊಬರ್ ಗ್ಯಾಸ್ ಹೊಡೆದು ಶೆಡ್ಡು ನಿರ್ಮಿಸಿರುತ್ತಾರೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಗ್ಯಾಸ್ ಪ್ಲಾಂಟ ಹೊಡೆಯುವಾಗ ನಿಪಿ-2 ರಿಂದ 9 ರಂತೆ ಫೋಟೋ ತೆಗೆಯಲಾಗಿತ್ತು ಅಂದರೆ ಸಾಕ್ಷಿಯು ಬಾವಿಯಿತ್ತು, ಬಾವಿಗೆ ಗ್ಯಾಸ್ ಪ್ಲಾಂಟ ಹಾಕಲಾಗಿತ್ತು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಗ್ಯಾಸ್ ಪ್ಲಾಂಟ ಹೊಡೆದು ಹಾಕಿದ್ದರು ಎಂದು ವಾದಿಯು ದೂರು ನೀಡಿದ್ದರೂ ಅಂದರೆ ಸಾಕ್ಷಿಯು ತನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.